ಓ.ಎಸ್.70/2025,                ಪಿ.ಡಬ್ಲ್ಯೂ.1          ಹೆಸರುಃ ಜಗದೀಶ್ ಚಂದ್

**ದಿಃ18-11-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಜಿ.ಇ.ಆರ್. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಪ್ರತಿವಾದಿಯು ನಮ್ಮ ಬ್ಯಾಂಕಿಗೆ ಸಾಲವನ್ನು ಪಡೆಯುವ ಸಲುವಾಗಿ ನೀಡಿದಂತಹ ದಿನಾಂಕಃ30.07.2017 ರ ಸಾಲದ ಅರ್ಜಿಯನ್ನು ಹಾಜರುಪಡಿಸಿದ್ದು ನಿಪಿ-1 ಎಂದು ಗುರುತಿಸಲಾಯಿತು.

ಪ್ರತಿವಾದಿಯು ನೀಡಿದ ಸಾಲದ ಅರ್ಜಿಯ ಕುರಿತಾಗಿ ಮಂಜೂರಾತಿ ಮಾಡಿದಂತಹ ದಾಖಲಾತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

ಪ್ರತಿವಾದಿಯು ಪಡೆದಂತಹ ಸಾಲದ ಕುರಿತಾಗಿ ವಾದಿಯ ಬ್ಯಾಂಕಿಗೆ ಜಾರಿಮಾಡಿಕೊಟ್ಟಂತಹ ಸಾಲದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

ಪ್ರತಿವಾದಿಯು ಸಾಲವನ್ನು ಮರುಪಾವತಿ ಮಾಡುವ ಕುರಿತಾಗಿ ಜಾರಿ ಮಾಡಿಕೊಟ್ಟಂತಹ ಸಾಲದ ನವೀಕರಣದ ಕುರಿತಾದ 2 ದಾಖಲಾತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

ಪ್ರತಿವಾದಿಗೆ ಸಂಬಧಿಸಿದ ಸಾಲದ ಎಕ್ಸ್‌ಟ್ರಾಕ್ಟ್‌ನ ಪ್ರತಿಯನ್ನು ಹಾಜರುಪಡಿಸಿದ್ದು ನಿಪಿ-6 ಎಂದು ಗುರುತಿಸಲಾಯಿತು.

**ಪ್ರತಿವಾದಿಯರ ವಕೀಲರ ಮನವಿಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ